ತಾರೀಖು 21ನೆ ಫೆಬ್ರವರಿ 1907.

ನಂ. 7241—ಸ್ಯಾನಿಟರಿ 66-06—31, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ—ಹಾಸನ ಡಿಸ್ಟ್ರಿಕ್ಟ್‌ನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.				ತಾಲ್ಲೂಕು.
ಚೀಕನಹಳ್ಳಿ	...	....	....	ಬೇಲೂರು.
ಗಾನಹಳ್ಳಿ	...	...	...	ಹಾಸನ.

ತಾರೀಖು 26ನೆ ಫೆಬ್ರವರಿ 1907.

ನಂ. 7377—ಸ್ಯಾನಿಟರಿ 170-06—6, ಮೈಸೂರು ಡಿಸ್ಟ್ರಿಕ್ಟ್ ಎಡತೊರೆ ತಾಲ್ಲೂಕಿನ ಕಪ್ಪಡಿ ಗ್ರಾಮಕ್ಕೆ ಕಪ್ಪಡಿ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಫೆಬ್ರವರಿ 11ನೆ ತಾರೀಖಿನಿಂದ ಮಾರ್ಚಿ 15ನೆ ತಾರೀಖಿನ ವರಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 26ನೆ ಫೆಬ್ರವರಿ 1907.

ನಂ. 7380—ಸ್ಯಾನಿಟರಿ 129-06—6, ಶಿವಮೊಗ್ಗ ಡಿಸ್ಟ್ರಿಕ್ಟ್ ಶಿವಮೊಗ್ಗ ತಾಲ್ಲೂಕಿನ ಕೂಡ್ಲಿ ಗ್ರಾಮಕ್ಕೆ ಶ್ರೀ ಸ್ವಯಂಭೂ ಮೇಶ್ವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 15ನೆ ತಾರೀಖಿನಿಂದ 1907ನೆ ಇಸವಿ ಮಾರ್ಚಿ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 19ನೆ ಫೆಬ್ರವರಿ 1907.

ನಂ. ಫೈ. 6275 - ಜ. ಫೈ. 100-06—21, ಮೈಸೂರು ಸೀಮೆಯ ಹುಜೂರು ಖಜಾನೆಯ ಆಫಿಸರಾದ ಮಿ॥ ಕೆ. ಕೃಷ್ಣಯ್ಯರವರಿಗೆ 1907ನೆ ಇಸವಿ ಜನವರಿ 24ನೆ ತಾರೀಖಿನ ಫೈ. 5661—ಜ. ಫೈ. 100-06—19ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟ ತಲಬಿಲ್ಲದ ಬಂದು ತಿಂಗಳ ಎಕ್‌ಸ್ಟ್ರಾರ್ಡಿನೆರಿ ಯಾ ಅಸಾಧಾರಣ ರಜಾವನ್ನು ಇದರಿಂದ ಎರಡು ತಿಂಗಳಿಂದ ಹೆಚ್ಚಿಸಿ ಇದೆ.

2. ಮಿ॥ ಕೃಷ್ಣಯ್ಯರ್ ರಜಾವಿನಮೇಲ್ಲಿ ಇರುವ ಕಾಲದಲ್ಲಿ ಅಸಿಸ್ಟೆಂಟ್ ಕಂಟ್ರೋಲರ್ ಮಿ॥ ಬಿಷ್ಪೋಪಂಕ್ ಬಾದಾಮಿಯವರೇ ಹುಜೂರು ಖಜಾನೆಯ ಚಾರ್ಜಿನಲ್ಲಿ ಈಗಿನಂತೆಯೇ ಇರತಕ್ಕದ್ದು.

ತಾರೀಖು 16ನೆ ಫೆಬ್ರವರಿ 1907.

ನಂ. 7547—Ft. 132-06—2, ಮೈಸೂರು ಶೀಮೆಯಲ್ಲಿ ವ್ಯಾಘ್ರಗಳನ್ನು ಬೇಟೆಗೋಸ್ಕರ ರಕ್ಷಿಸಿ ಇಟ್ಟಿರುವ ಜಂಗಲಿಗಳ ಚಾರ್ಜಿನಲ್ಲಿರುವ ಆಫಿಸರ್ ಮಿ॥ ಕೆ. ಮುತ್ತಯ್ಯನವರನ್ನು 1906ನೆ ಇಸವಿಯ ಡಿಸೆಂಬರ್ 3ನೆ ತಾರೀಖಿನಿಂದ ಫಾರೆಸ್ಟ್ ಅಸಿಸ್ಟೆಂಟ್ ಕನ್‌ಸರ್ವೇಟರ 5ನೆ ತರಗತಿಯಲ್ಲಿ (ಸೂಪರ್ ನ್ಯೂಮರೆರಿಯಾಗಿ) ಕಾಯಂ ಮಾಡಿ ಇದೆ.